# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/67/ಎಸ್‌ಸಿಹೆಚ್(2)/ 2011-12

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:10-10-2011.

## -: ಸುತ್ತೋಲೆ :-

**ವಿಷಯ:-** ಭೂಸೈನ್ಯ ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾ ದಳದ ಸಿಬ್ಬಂದಿಯವರ ಮಕ್ಕಳು : ಅವಲಂಬಿತರಿಗೆ **2011-2012**ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಜಿ ಕರೆಯುವ ಬಗ್ಗೆ.

**ಉಲ್ಲೇಖ:-** 1) ಸರ್ಕಾರಿ ಆದೇಶ ಸಂ.ಇಡಿ 93 ಎಸ್‌ಸಿಎಲ್ 62, ದಿ: 6/09/63.
2) ಸರ್ಕಾರಿ ಆದೇಶ ಸಂ. ಇಡಿ 37 ಸಿಡಿಪಿ 78 ದಿ: 20/08/1979.

-00000000-

**2011-2012** ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಸರ್ಕಾರಿ: ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಭೂಸೈನ್ಯ, ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ಜೂನಿಯರ್ ಕಮೀಷನ್ಡ್ ಆಫೀಸರ್ ರ್‍ಯಾಂಕ್ ಹಾಗೂ ಅದಕ್ಕಿಂತ ಕಡಿಮೆ ರ್‍ಯಾಂಕ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾ ದಳದ ನೌಕರರ ಮಕ್ಕಳು: ಅವಲಂಬಿತರಿಂದ **2011-2012** ನೇ ಸಾಲಿನ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ.

ನಮೂದಿತ ಅರ್ಜಿ ಫಾರಂಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಯ ಕಛೇರಿಯಿಂದ ಪಡೆಯಬಹುದಾಗಿದೆ. ಅರ್ಜಿ ಲಭ್ಯವಿಲ್ಲದ ಪಕ್ಷದಲ್ಲಿ, ಪ್ರಿನ್ಸಿಪಾಲರು ಈ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅರ್ಜಿ ಕಳುಹಿಸಿಕೊಡುವ ಕ್ರಮ ಜರುಗಿಸಲಾಗುವುದು.

೧. **ಅರ್ಹತೆಗಳು:**

ಅ) ಮೆರಿಟ್ ಕೋಟಾದಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರು.

ಆ) ವಿದ್ಯಾರ್ಥಿಗಳು ರಕ್ಷಣಾದಳದ ಸಿಬ್ಬಂದಿಯವರ ಮಕ್ಕಳು: ಅವಲಂಬಿತರಾಗಿದ್ದು, ಖಾಯಂ ವಾಸಸ್ಥರಾಗಿರಬೇಕು ಅಥವಾ ನಿಯಮಾನುಸಾರ ವಿನಾಯಿತಿ ಪಡೆದಿರಬೇಕು.

ಇ) ಜೂನಿಯರ್ ಕಮೀಷನ್ಡ್ ಆಫೀಸರ್ ರ್‍ಯಾಂಕ್ ಅದಕ್ಕಿಂತ ಕಡಿಮೆ ರ್‍ಯಾಂಕ್‌ನಲ್ಲಿ ಸೇವೆ ಸಲ್ಲಿಸುತ್ತಿರುವವರ ಮಕ್ಕಳು: ಅವಲಂಬಿತರಾಗಿರಬೇಕು.

ಈ) ಸರ್ಕಾರದ ಆದೇಶ ಕ್ರ. ಇಡಿ 3 ಸಿಡಿಪಿ 66 ದಿನಾಂಕ:28/02/66 ರನ್ವಯ ಕಮೀಷನ್ಡ್ ಅಧಿಕಾರಿಗಳ ಮಕ್ಕಳಿಗೂ: ಆಶ್ರಿತರಿಗೂ ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಿಲ್ಲ.

ಉ) ರಕ್ಷಣಾ ಸೇವೆಯ ವೆಚ್ಚದಿಂದ ಸಂಬಳ ಪಡೆಯುತ್ತಿದ್ದರು, ಭೂಸೈನ್ಯ, ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ಸಿವಿಲಿಯನ್ ಸಿಬ್ಬಂದಿಯವರ ಮಕ್ಕಳು/ಆಶ್ರಿತರು ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುವುದಿಲ್ಲ.

೨. **ಅರ್ಜಿ ಸಲ್ಲಿಸುವ ವಿಧಾನ:**

ಅ) ವಿದ್ಯಾರ್ಥಿಯು ಅರ್ಜಿ ನಮೂನೆಯ ಪೈಕಿ ಭಾಗ ' ಎ ' ಅನ್ನು ಭರ್ತಿಮಾಡಿ ಸಂಬಂಧಪಟ್ಟ ರಕ್ಷಣಾ ಅಧಿಕಾರಿಗಳಿಗೆ ದ್ವಿಪ್ರತಿಗಳಲ್ಲಿ ಕಳುಹಿಸಬೇಕು.

ಆ) ಸಂಬಂಧಪಟ್ಟ ರಕ್ಷಣಾ ಇಲಾಖೆ ಅಧಿಕಾರಿಗಳು, ಪಾರ್ಟ್ ' ಬಿ 'ಯಲ್ಲಿ ರಕ್ಷಣಾ ದಳದ ಸಿಬ್ಬಂದಿಯವರ ಪೂರ್ಣ ವಿವರವನ್ನು ತುಂಬಿ, ದೃಢೀಕರಿಸಬೇಕು. ಒಂದು ಅರ್ಜಿಯನ್ನು ನೇರವಾಗಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001, ಇವರಿಗೆ ಕಳುಹಿಸಿಕೊಡಬೇಕು. ಇನ್ನೊಂದು ಅರ್ಜಿಯ ಪ್ರತಿಯನ್ನು ಸಿಬ್ಬಂದಿಯವರ ಪೂರ್ಣ ವಿವರದೊಂದಿಗೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗೆ ರವಾನಿಸಬೇಕು.

ಇ) ಪಾಲಿಟೆಕ್ನಿಕ್ ಪ್ರಿನ್ಸಿಪಾಲರು ರಕ್ಷಣಾ ಇಲಾಖೆಯಿಂದ ಬಂದ ಅರ್ಜಿಯನ್ನು ಪಾರ್ಟ್ ' ಎ ' ಮತ್ತು ' ಬಿ ' ಪೂರ್ಣವಾಗಿ ತುಂಬಿರುವುದನ್ನು ಪರಿಶೀಲಿಸಿ ಪಾರ್ಟ್ ' ಸಿ 'ಯಲ್ಲಿ ಪ್ರಿನ್ಸಿಪಾಲರು ಶಿಫಾರಸ್ಸು ಮಾಡಿ, ಸಹಿ ಹಾಗೂ ಮೊಹರು ಹಾಕಿರಬೇಕು. ವಿದ್ಯಾರ್ಥಿಗೆ ಸಂಬಂಧಿಸಿದಂತೆ ಕೆಳಗೆ ಸೂಚಿಸಿರುವ ಪ್ರಮಾಣ ಪತ್ರಗಳ ಪ್ರತಿಯನ್ನು ಲಗತ್ತಿಸಿ, ಹಾಗೂ ಅರ್ಹತೆ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳ ವಿವರವನ್ನು ಅನುಬಂಧ-೨ರಲ್ಲಿ (ಒಂದು ಪ್ರತಿ) ತುಂಬಿ ಈ ಕಛೇರಿಗೆ ಕಳುಹಿಸಿಕೊಡಬೇಕು. ಪ್ರಸ್ತಾವನೆಯನ್ನು ಒಟ್ಟಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. ಬಿಡಿ ಬಿಡಿಯಾಗಿ ಸಲ್ಲಿಸುವ, ಅಪೂರ್ಣ, ಅರ್ಹತೆ ಹೊಂದಿಲ್ಲದ ಹಾಗೂ ನಿಗದಿತ ಅವಧಿ ಮೀರಿ ಬರುವ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ನೇರವಾಗಿ ಈ ಕಛೇರಿಗೆ ಕಳುಹಿಸಬಾರದು.

೧). ವಿದ್ಯಾರ್ಥಿಯ ಹಿಂದಿನ ವರ್ಷದ ಎಲ್ಲಾ ಅಂಕಪಟ್ಟಿಗಳ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಬೇಕು. ಅಂದರೆ, ಪ್ರಥಮ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ದ್ವಿತೀಯ ಡಿಪ್ಲೋಮಾ ವಿದ್ಯಾರ್ಥಿಗಳು – 1, 2ನೇ ಸೆಮಿಸ್ಟರ್ ಡಿಪ್ಲೋಮಾ ಅಂಕಪಟ್ಟಿಗಳು, ತೃತೀಯ ಡಿಪ್ಲೋಮಾ ವಿದ್ಯಾರ್ಥಿಗಳು 1, 2, 3 ಮತ್ತು 4ನೇ ಸೆಮಿಸ್ಟರ್ ಅಂಕಪಟ್ಟಿಗಳು.

ವಿದ್ಯಾರ್ಥಿಗಳಿಗೆ ಯಾವುದೇ ಸೆಮಿಸ್ಟರ್‌ನ ಅಂಕಪಟ್ಟಿಯು ಸಂಬಂಧಪಟ್ಟ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಬಂದಿಲ್ಲದ ಸಂದರ್ಭದಲ್ಲಿ ಆ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಫಲಿತಾಂಶದ ಆಧಾರದ ಮೇಲೆ ಅಂಕಪಟ್ಟಿಯ ನಮೂನೆಯಲ್ಲಿ ಅಂಕ ನಮೂದಿಸಿ, ಪ್ರಿನ್ಸಿಪಾಲರು ದೃಢೀಕರಿಸಿದ ಪ್ರತಿಯನ್ನು ಸಲ್ಲಿಸಬಹುದು.

೨). ಪ್ರವೇಶ ಪಡೆದ ವಿದ್ಯಾರ್ಥಿಗಳು ಕೇಂದ್ರೀಕೃತ ಪ್ರವೇಶ ಘಟಕದಲ್ಲಿ (ನೋಡಲ್ ಸೆಂಟರ್) ಪ್ರವೇಶ ಪಡೆದ ಆದೇಶ (ಸೀಟು ಹಂಚಿಕೆ) ಪ್ರತಿ ಲಗತ್ತಿಸಬೇಕು.

೩). ವಿದ್ಯಾರ್ಥಿಯು ವಿದ್ಯಾರ್ಥಿ ನಿಲಯದ ಅಥವಾ ಊಟ ಮತ್ತು ವಸತಿ ಸೌಕರ್ಯ ಒದಗಿಸಿದವರಿಂದ ಪ್ರಮಾಣ ಪತ್ರ

೪). ಅನುಬಂಧ–1ರಲ್ಲಿರುವಂತೆ ಅವಲಂಭಿತ ಪ್ರಮಾಣ ಪತ್ರ (ವಿದ್ಯಾರ್ಥಿಯು ರಕ್ಷಣಾ ದಳದ ನೌಕರರಿಗೆ ಸಹೋದರ, ಸಹೋದರಿಯಾಗಿದ್ದರೆ ಮಾತ್ರ) ಲಗತ್ತಿಸಬೇಕು.

೩.. ಅರ್ಜಿಯನ್ನು ಪಾಲಿಟೆಕ್ನಿಕ್‌ಗಳಲ್ಲಿ ಸ್ವೀಕರಿಸಲು ಕೊನೆಯ ದಿನಾಂಕವನ್ನು **20-10-2011** ಎಂದು ನಿಗದಿಪಡಿಸಿದೆ. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಬಾರದು. ವಿದ್ಯಾರ್ಥಿವೇತನ ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪಾಲಿಟೆಕ್ನಿಕ್‌ನಲ್ಲಿ ಒದಗಿಸಬೇಕು. ವಿದ್ಯಾರ್ಥಿಗಳಿಂದ ಎಲ್ಲಾ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಈ ಕಛೇರಿಗೆ **30-10-2011** ರೊಳಗೆ ಕಳುಹಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಬರುವ ಅರ್ಜಿಯನ್ನು ವಿದ್ಯಾರ್ಥಿವೇತನಕ್ಕೆ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.

೪. <u>ಭೋಜನ ಮತ್ತು ವಸತಿ ಶುಲ್ಕ</u>

ಅ. ವಿದ್ಯಾರ್ಥಿಯು ಪಾಲಿಟೆಕ್ನಿಕ್ ತರಗತಿಗೆ ಸೇರಿದಾಗಿನಿಂದ ಶೈಕ್ಷಣಿಕ ವರ್ಷ ಮುಗಿಯುವವರೆಗೆ.

| | |
|---|---|
| ಅ. ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿದ್ದರೆ ಅಥವಾ ಊಟ ವಸತಿ ಬಗ್ಗೆ ಸ್ವಂತ ಏರ್ಪಾಡು ಮಾಡಿಕೊಂಡಿದ್ದರೆ ತಿಂಗಳಿಗೆ | – ₹ **70-00** ನಂತೆ |
| ಆ. ವಿದ್ಯಾರ್ಥಿಯು ತಂದೆ ತಾಯಿ ಜೊತೆಯಲ್ಲಿದ್ದರೆ | – ₹ **15-00** ನಂತೆ |
| ಬ. ಗ್ರಂಥ ಅನುದಾನ ವರ್ಷಕ್ಕೆ | – ₹ **50-00** ನಂತೆ |
| ಕ. ವಸ್ತ್ರ ಭತ್ಯೆ ವರ್ಷಕ್ಕೆ | – ₹ **50-00** ನಂತೆ |

**<u>ಅಪೂರ್ಣವಾದ, ಸಹಿಯಿಲ್ಲದ ಅರ್ಜಿ ಹಾಗೂ ಇತರ ಅವಶ್ಯಕ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮತ್ತು ನಿಗದಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು</u>**

***ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರ, ಅರ್ಜಿ ನಮೂನೆ ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು.***

<u>www.dte.kar.nic.in</u>

ಸಹ ನಿರ್ದೇಶಕರು (ಆ)

ಇವರಿಗೆ,

೧) ಪ್ರಿನ್ಸಿಪಾಲರು, ಎಲ್ಲಾ ಸರ್ಕಾರಿ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ (ಅನುಬಂಧ–1 ಮತ್ತು 2 ನಮೂನೆಯನ್ನು ಮಾಹಿತಿಗೆ ಲಗತ್ತಿಸಲಾಗಿದೆ.) ಈ ಸುತ್ತೋಲೆಯನ್ನು ವಿದ್ಯಾರ್ಥಿಗಳ ಗಮನಕ್ಕಾಗಿ, ಸೂಚನ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

೨) ಈ ನಿರ್ದೇಶನಾಲಯದ ಸೂಚನಾ ಫಲಕಕ್ಕೆ.

೩) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ. ಬೆಂಗಳೂರು ಇವರ ಮಾಹಿತಿಗೆ.

೪) ಕಡತದ ಪ್ರತಿ

೫) ಸಂಗಣಕ ನಿರ್ವಾಹಕರು/ಸಿಸ್ಟಮ್ ಅನಾಲಿಸ್ಟ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಇವರ ಮೂಲಕ, ಅಂತರ್ಜಾಲದಲ್ಲಿ ಪ್ರಕಟಿಸಲು.

## ಅನುಬಂಧ -

## ಅವಲಂಬಿತ

ಸಂಖ್ಯೆ: ಇಡಿ 21 ಟಿಟಿಪಿ 64 ದಿನಾಂಕ: 16/10/1965 ರಂತೆ

ಶ್ರೀ/ಶ್ರೀಮತಿ ________________ ಪಾಲಿಟೆಕ್ನಿಕ್ ________________

________________________________ ಡಿಪ್ಲೋಮಾದಲ್ಲಿ

ವ್ಯಾಸಂಗ ಮಾಡುತ್ತಿರುವ ರಕ್ಷಣಾ ದಳದಲ್ಲಿ ________________

ಯೂನಿಟ್‌ನಲ್ಲಿ ________________________ ರ್‍ಯಾಂಕ್‌ನಲ್ಲಿ

________________ ಸಂಖ್ಯೆ ________________ ಯಲ್ಲಿರುವವರ

ಸಹೋದರ/ಸಹೋದರಿಯಾಗಿದ್ದು, ಅವರು ಸಂಪೂರ್ಣ ಅವಲಂಬಿತರಾಗಿದ್ದಾರೆ ಎಂದು ಮೇಲೆ ಹೇಳಿದ ಸರ್ಕಾರಿ ಆದೇಶದ ಪ್ರಕಾರ ಪರಿಶೀಲಿಸಿ ದೃಢೀಕರಿಸಿದೆ.

ಪ್ರಾಂಶುಪಾಲರು.

**ಸೂಚನೆ:**

ಈ ಪ್ರಮಾಣ ಪತ್ರವನ್ನು ವಿದ್ಯಾರ್ಥಿ ಅವರ ಕುಟುಂಬದವರಿಗೆ ರಕ್ಷಣಾ ದಳದವರಿಂದ ಹಣ ಸ್ವೀಕರಿಸುವುದಕ್ಕೆ ಮನಿ ಆರ್ಡರ್ ಪ್ರೂಫ್ ನೀಡಿದ ಆಧಾರದ ಮೇಲೆ ಪ್ರಮಾಣೀಕರಿಸಿ ದೃಢೀಕರಿಸಬೇಕು.

ಅನುಬಂಧ-2

ಪಾಲಿಟೆಕ್ನಿಕ್ ಹೆಸರು: ........................................

ರಕ್ಷಣಾ ದಳದ ಸೇವೆಯಲ್ಲಿರುವವರ ಮಕ್ಕಳಿಗೆ/ಅವಲಂಬಿತರಿಗೆ 2011-12 ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡಲು ಪ್ರಸ್ತಾವನೆ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ನೌಕರರ ಹೆಸರು ಮತ್ತು ವಿದ್ಯಾರ್ಥಿ ಯೊಡನೆ ಸಂಬಂಧ | ನಿವೃತ್ತರಾಗಿರುವರೆ ಅನುಪಯುಕ್ತರೆ ಅಥವಾ ಮರಣ ಹೊಂದಿರುವರೆ | ಸೇವಾನಿರತರಾಗಿದ್ದರೆ ನೌಕರಿಯ ವಿವರ | ವಿದ್ಯಾರ್ಥಿಯು ಯಾವ ಶಾಲೆಯಲ್ಲಿ ಓದುತ್ತಿರುವ ವರ್ಷ ಮತ್ತು ವಿಭಾಗ | ಅಭ್ಯರ್ಥಿ ಯಾವ ಕೋಟಾದಲ್ಲಿ ಸೀಟು ಪಡೆದಿರುತ್ತಾನೆ | ವಿದ್ಯಾರ್ಥಿಯು ತೇರ್ಗಡೆಯಾಗಿದ್ದಾನೆಯೋ ಅಥವಾ ಅದೇ ತರಗತಿಯಲ್ಲಿ ಇದ್ದಾನೆಯೋ | ವಿದ್ಯಾರ್ಥಿಯು ವಾಸಿಸುತ್ತಿರುವ ವಿದ್ಯಾರ್ಥಿ ನಿಲಯದ ಹೆಸರು | ವಿದ್ಯಾರ್ಥಿ ನಿಲಯ ಇಲ್ಲದಿದ್ದಲ್ಲಿ ಪಡೆದಿರುವ ಖಾಸಗಿ ವಸತಿ ಕೊಠಡಿಯ ಸ್ಥಳ ವಿವರ | ಅರ್ಜಿ ಪ್ರಥಮವಾಗಿ /ನವೀಕರಣವೇ | ಈ ವಿದ್ಯಾರ್ಥಿವೇತನವು ಹಿಂದಿನ ವರ್ಷ ಮಂಜೂರಾಗಿದ್ದರೆ ಮಂಜೂರಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|---|---|---|---|---|---|---|---|---|
| | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | | | | | | | | | | | | |
| 2 | | | | | | | | | | | | |
| 3 | | | | | | | | | | | | |
| 4 | | | | | | | | | | | | |

<u>ವಿದ್ಯಾರ್ಥಿವೇತನಕ್ಕೆ ಶಿಫಾರಸ್ಸು ಮಾಡಿರುವ ಪ್ರಮಾಣ ಪತ್ರಗಳು:</u>

01) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಮೇಲ್ಕಂಡ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ. ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರು ಹಾಗೂ ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯಲು ಯಾವ ವಂತಿಗೆ ಹಣವನ್ನು ನೀಡಿಲ್ಲವೆಂದು ದೃಢೀಕರಿಸಲಾಗಿದೆ.

02) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

03) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ನಿಲ್‌ನಲ್ಲೂ ಕ್ಲೈಮ್ ಮಾಡಿರುವುದಿಲ್ಲ.

04) ಮುಂದೆ ಕೋರಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ವತಿಯಿಂದ ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆಂದು ದೃಢೀಕರಿಸಿದೆ.

05) ವಿದ್ಯಾರ್ಥಿಯ ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

06) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡಿರುತ್ತಾರೆ ಅಥವಾ ವಿನಾಯಿತಿ ಪಡೆದಿರುತ್ತಾರೆಂದು ದೃಢೀಕರಿಸಿದೆ.

07) ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಖಾಯಂ ವಾಸಸ್ಥರಾದ ರಕ್ಷಣಾ ದಳದ ನೌಕರರ ಮಕ್ಕಳು ಅವಲಂಬಿತರಾಗಿದ್ದಾರೆ. / ನಿಯಮಾನುಸಾರ ವಿನಾಯಿತಿ ಪಡೆದಿರುತ್ತಾರೆಂದು ದೃಢೀಕರಿಸಿದೆ.

08) ಹಿಂದಿನ ವರ್ಷಗಳಲ್ಲಿ ಮಂಜೂರಾಗಿದ್ದ ವಿದ್ಯಾರ್ಥಿ ವೇತನದ ಹಣವನ್ನು ಪೂರ್ತಿಯಾಗಿ ವಿದ್ಯಾರ್ಥಿಗಳಿಗೆ ಪಾವತಿ ಮಾಡಲಾಗಿದೆ.

09) ಪಾವತಿ ಮಾಡದೆ ಉಳಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಪ್ರತಿಯನ್ನು ಲಗತ್ತಿಸಿದೆ ಎಂದು ದೃಢೀಕರಿಸಲಾಗಿದೆ. (ಚಲನ್ ವಿವರ..........................................)

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು.